<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿಸಿ ನಂ. 1957/2020**

| | | | |
|---|---|---|---|
| **ಹೆಸರು** | **:** | **ಸಂತೋಷ** | **ಚಾ.ಸಾ.1** |
| **ತಂದೆಯ ಹೆಸರು** | **:** | **ಕತಲಪ್ಪ** | **ಪ್ರಾ.ಸಾ.1** |
| **ವಯಸ್ಸು** | **:** | **35 ವರ್ಷ** | **ದಿನಾಂಕಃ 05-04-2024** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಯಲಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-2 ರಿಂದ 7 ರವರು ನನಗೆ ಗೊತ್ತು. ಚಾಸಾ-2, 3, 5 ರಿಂದ 7 ರವರು ನಮ್ಮ ಊರಿನವರು. ಆರೋಪಿತರು ನಮ್ಮ ಹೊಲದ ಪಕ್ಕದ ಹೊಲದ ಮಾಲೀಕರು.

ದಿನಾಂಕ 21-09-2020 ರಂದು ರಾತ್ರಿ 8 ಗಂಟೆಗೆ ನಾನು ನಮ್ಮ ಹೊಲಕ್ಕೆ ಹೋದಾಗ 1 ರಿಂದ 5 ನೇ ಆರೋಪಿತರು ಹೊಲಕ್ಕೆ ಬಂದು ತಮ್ಮ ಅತ್ತಿಗೆಯಾದ ಚಾಸಾ-4 ರವರೊಂದಿಗೆ ನನ್ನ ಸಂಬಂಧವಿದೆ ಎಂದು ಹೇಳಿ 1 ನೇ ಆರೋಪಿ ರಾಡಿನಿಂದ ನನ್ನ ತಲೆಯ ಬಲಭಾಗಕ್ಕೆ ಹೊಡೆದಿರುತ್ತಾನೆ, 2 ನೇ ಆರೋಪಿ ಬಡಿಗೆಯಿಂದ ಬಲಗಾಲು ಮೊಳಕಾಲಿಗೆ ಹೋಡೆದಿರುತ್ತಾನೆ, 3 ನೇ ಆರೋಪಿ ಕೈಯಿಂದ ನನ್ನ ಬೇನ್ನಿಗೆ ಹೋಡದಿರುತ್ತಾನೆ, 4 ರಿಂದ 6 ನೇ ಆರೋಪಿತರು ಆ ಸುಳೇಮಗನಿಗೆ ಹೋಡಿರಿ ಎಂದು ಪ್ರಚೋಧನೆ ನೀಡುತ್ತಿದ್ದರು. ನಾನು ನೋವಿನಿಂದ ಅಳುತ್ತಿರುವಾಗ ಚಾಸಾ-5, 6 ಮತ್ತು ನಮ್ಮ ಪಾಲುಗಾರನಾದ ಚಾಸಾ-7 ರವರು ಬಂದು ಜಗಳ ಬೀಡಿಸಿರುತ್ತಾರೆ. ಆಗ ನನಗೆ 1 ರಿಂದ 2 ನೇ ಆರೋಪಿತರು ಜಗಳ ಬೀಡಿಸಿದ್ದಾರೆ ಎಂದು ಬಿಟ್ಟಿದ್ದೇವೆ ಇಲ್ಲ ಅಂದರೇ ಜೀವ ಸಹಿತ ಬೀಡುತ್ತಿರಲಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಾರೆ. ಚಾಸಾ-5 ರಿಂದ 7 ರವರು ನನಗೆ ಸುಲೇಪೇಟ ಸರಕಾರಿ ಆಸ್ಪತ್ರೆಗೆ ರಾತ್ರಿ 8.30 ಗಂಟೆಗೆ ಕರೆದುಕೊಂಡು ಹೋಗಿರುತ್ತಾರೆ.

ರಾತ್ರಿ 9 ಗಂಟೆ ಸಮಾರಿಗೆ ಪೋಲಿಸರು ಆಸ್ಪತ್ರೆಗೆ ಬಂದು ನನಗೆ ವಿಚಾರಿಸಿ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದು ನನಗೆ ಮನೆಗೆ ಕಳುಹಿಸಿದ್ದಾರೆ. ಈಗ ನೋಡುತ್ತಿರುವ ಹೇಳಿಕೆ ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸಾಕ್ಷಿ ಗುರುತಿಸಿರುವ ಹೇಳಿಕೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-

1(ಎ) ಎಂದು ಗುರುತಿಸಲಾಯಿತು.

ನನಗೆ ಹೊಡೆಯಲು ಬಳಸಿದ್ದ ಬಡಿಗೆ ಮತ್ತು ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಒಂದು ರಾಡ್ ಮತ್ತು ಒಂದು ಬಡಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಭಾವಚಿತ್ರದಲ್ಲಿರುವ ಸ್ಥಳದಲ್ಲಿ ಜಗಳವಾಗಿದೆ. ನಿಪಿ-2 ರ ಭಾವಚಿತ್ರದಲ್ಲಿ ನನ್ನ ಜೊತೆ ಚಾಸಾ-2 ಮತ್ತು 3 ರವರು ಇದ್ದಾರೆ. ಘಟನೆಯಾದ ಮರುದಿನ ಪೋಲಿಸರು ಸ್ಥಳವನ್ನು ಪರಿಶೀಲನೆ ಮಾಡಲು ಬಂದಾಗ ನಿಪಿ-2 ರ ಭಾವಚಿತ್ರವನ್ನು ಪಡೆದಿದ್ದಾರೆ. ಆ ಸಮಯಕ್ಕೆ ಪೋಲಿಸರು ಪಂಚನಾಮೆ ಮಾಡಿದ್ದಾರೆ. ಮು.ಮಾ-1 ಮತ್ತು 2 ನ್ನು ರೋಡಿನ ಹತ್ತಿರ ಬಿದ್ದಾಗ ಪೋಲಿಸರು ಜಪ್ತಿ ಮಾಡಿದ್ದಾರೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ನಿಪಿ-1 ರ ನನ್ನ ಹೇಳಿಕೆಯನ್ನು ನಾನು ಓದಿದ್ದೇನೆ. ನನ್ನ ಹೇಳಿಕೆಯಲ್ಲಿ ಉಲ್ಲೇಖವಿರುವಂತೆ 9 ಗಂಟೆಗೆ ಘಟನೆಯಾಗಿರುವುದು ತಪ್ಪು ಉಲ್ಲೇಖವಾಗಿದೆ. ಪೋಲಿಸರು ನಿಪಿ-1 ನ್ನು ಎಲ್ಲಿ ಟೈಪ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಪೋಲಿಸರು ಟೈಪ ಮಾಡಿಸಿ ತೆಗೆದುಕೊಂಡು ಬಂದು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ನನ್ನ ಹೇಳಿಕೆಯ ಪ್ರಕಾರ ಬರೆದುಕೊಂಡು ಅದನ್ನು ಟೈಪ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯ ಪ್ರಕಾರ ಟೈಪ ಆಗಿದೆ ಎಂದು ಓದಿದ್ದಿರಾ ಅಥವಾ ಓದಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಓದಿದ್ದೇನೆ ಆದರೆ ಸಮಯ ಗಮನಿಸಿಲ್ಲ ಎಂದು ನುಡಿಯುತ್ತಾರೆ.

ಘಟನ ಸ್ಥಳದಿಂದ ಸುಲೇಪೇಟ ಗ್ರಾಮ 5 ಕಿ.ಮೀ ದೂರದಲ್ಲಿದೆ. ಘಟನ ಸ್ಥಳದಿಂದ ಆಸ್ಪತ್ರೆಗೆ ಚಾಸಾ-5 ಮತ್ತು 6 ರವರು ನನಗೆ ಕರೆದುಕೊಂಡು ಹೋಗಿದ್ದಾರೆ. ನನ್ನ ತಾಯಿ ಇನ್ನು ಜೀವಂತ ಇದ್ದಾರೆ. ನನ್ನ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ತಾಯಿ ನನಗೆ ಆಸ್ಪತ್ರೆಗೆ ಕರೆದುಕೊಂಡು

ಹೋಗಿದ್ದಾರೆ ಎಂದು ಉಲ್ಲೇಖವಿದೆ ಎಂದರೆ ಸಾಕ್ಷಿ ನನಗೆ ಚಾಸಾ-5 ಮತ್ತು 6 ರವರು ಕರೆದು ಕೊಂಡು ಹೋಗಿದ್ದಾರೆ ಎಂದು ನುಡಿಯುತ್ತಾರೆ. ಘಟನ ಸ್ಥಳದಿಂದ ಸುಲೇಪೇಟ ಗ್ರಾಮಕ್ಕೆ ನಾವು ಆಟೋದಲ್ಲಿ ಹೋಗಿದ್ದೇವೆ. ಘಟನ ಸ್ಥಳವನ್ನು ರಾತ್ರಿ 8 ಗಂಟೆಗೆ ಬಿಟ್ಟು 30 ನಿಮಿಷದಲ್ಲಿ ಆಸ್ಪತ್ರೆ ತಲುಪಿರುತ್ತೇವೆ. ಯಾವುದೇ ಘಟನೆ ಆಗುವ 1 ಗಂಟೆ ಮುಂಚೆ ಬಿಟ್ಟು 8.30 ಗಂಟೆಗೆ ಆಸ್ಪತ್ರೆಗೆ ಬಂದಿರುತ್ತೇನೆ ಎಂದರೆ ಸಾಕ್ಷಿ ಘಟನ ಸ್ಥಳವನ್ನು 8 ಗಂಟೆಗೆ ಬಿಟ್ಟು 8.30 ಗಂಟೆಗೆ ಆಸ್ಪತ್ರೆಗೆ ಬಂದಿದ್ದೇವೆ ಎಂದು ನುಡಿಯುತ್ತಾರೆ.

ಆರೋಪಿತರು ನನಗೆ ರಾಡಿನಿಂದ ಅಥವಾ ಬಡಿಗೆಯಿಂದ ಹೋಡೆಯದೇ ಇದ್ದರು ಸಹ ಮತ್ತು ಘಟನೆಯಾಗದೇ ಇದ್ದರು ಸಹ ಆರೋಪಿತರು ನನ್ನ ವಿರುದ್ದ ದೂರು ಸಲ್ಲಿಸಿದ ಕಾರಣ ಸಮಯದ ವ್ಯತ್ಯಾಸ ಮಾಡಿಕೊಂಡು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-4 ರವರು ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ-7 ನಮ್ಮ ಪಾಲುಗಾರ ಎಂದರೆ ಸರಿ. ಚಾಸಾ-2 ಮತ್ತು 3 ರವರು ನಮ್ಮ ಊರಿನವರು ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ದೂರು ಸಲ್ಲಿಸಿದ ಕಾರಣ ಆರೋಪಿಯ ವಿರುದ್ದ ನಾನು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ರಾಡಿನಿಂದ ನನಗೆ ಹೋಡೆದೇ ಇಲ್ಲ ಮತ್ತು 2 ನೇ ಆರೋಪಿ ಬಡಿಗೆಯಿಂದ ನನಗೆ ಹೋಡೆದಿಲ್ಲ ಎಂದರೆ ಸರಿಯಲ್ಲ. ಉಳಿದ 3 ರಿಂದ 6 ನೇ ಆರೋಪಿತರು 1 ನೇ ಆರೋಪಿಗೆ ಪ್ರಚೋದನೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಜಗಳ ಆಗದೇ ಇದ್ದರು ಸಹ ನಾನು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೇಕಾದ ಸಾಕ್ಷಿದಾರರನ್ನು ಪ್ರಕರಣದಲ್ಲಿ ಸೇರಿಸಿ ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಲು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**